1	2	3
9.	ಚಿಕ್ಕಮಗಳೂರು	1655
10.	ಚಿತ್ರದುರ್ಗ	3858
11.	ದಾವಣಗೆರೆ (1998-99 ರಿಂದ	737
12.	ದಕ್ಷಿಣ ಕನ್ನಡ	5356
13.	ಧಾರವಾಡ	5450
14.	ಗದಗ (1998-99 ರಿಂದ)	470
15.	ಗುಲ್ಬರ್ಗಾ	4036
16.	ಹಾಸನ	2807
17.	ಹಾವೇರಿ (1998-99 ರಿಂದ)	343
18.	ಕೊಡಗು	866
19.	ಕೋಲಾರ	3486
20.	ಕೊಪ್ಪಳ (1998-99 ರಿಂದ)	378
21.	ಮಂಡ್ಯ	2786
22.	ಮೈಸೂರು	5338
23.	ರಾಯಚೂರು	3082
24.	ಶಿವಮೊಗ್ಗ	3539
25.	ತುಮಕೂರು	3580
26.	ಉಡುಪಿ (1998-99 ರಿಂದ)	810
27.	ಉತ್ತರಕನ್ನಡ	2530
	ಒಟ್ಟು	78051

ಟಿ. ನರಸೀಪುರ ಕಪಿಲ ಮತ್ತು ಕಾವೇರಿ ನದಿಗಳಲ್ಲಿ ಅಕ್ರಮ ಮರಳು ಸಾಗಾಣಿಕೆ ಕುರಿತು

2030 (2439) : ಡಾ: ಭಾರತಿ ಶಂಕರ್ (ಟಿ. ನರಸೀಪುರ) : ಮಾನ್ಯ ಗಡಿ ಮತ್ತು ಭೂ ವಿಜ್ಞಾನ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಟಿ. ನರಸೀಪುರ ಕಪಿಲಾ ಮತ್ತು ಕಾವೇರಿ ನದಿಗಳಿಗೆ ಅಡ್ಡಲಾಗಿ ಕಟ್ಟಿರುವ ಸೇತುವೆಗಳ ಕೆಳಗೆ ಅಕ್ರಮವಾಗಿ ಮರಳು ಸಾಗಾಣಿಕೆ ಮಾಡುತ್ತಿರುವುದರಿಂದ ಸೇತುವೆಗಳಿಗೆ ತೊಂದರೆಯಾಗಿ ಶಿಥಿಲವಾಗುತ್ತಿರುವುದು ಮತ್ತು ಸುತ್ತಮುತ್ತಲಿನ ಸೌಂದರ್ಯಕ್ಕೆ ಧಕ್ಕೆ ಒದಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಹಾಗಿದ್ದಲ್ಲಿ ಅಕ್ರಮ ಮರಳು ಸಾಗಣೆ ನಿಷೇಧಿಸಿ ಸರ್ಕಾರ ಆದೇಶ ಹೊರಡಿಸಿದೆಯೆ ಮತ್ತು ಎಂದು ಹೊರಡಿಸಿದೆ?

(ಇ) ಸರ್ಕಾರದ ಆದೇಶವಿದ್ದರೂ ಅಕ್ರಮ ಮರಳು ಸಾಗಾಣಿಕೆ ನಿಂತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದರೆ ತಪ್ಪಿತಸ್ಥರ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳು ಏನು?

(ಈ) ಅಕ್ರಮ ಮರಳು ಸಾಗಾಣಿಕೆಯನ್ನು ಸಂಪೂರ್ಣವಾಗಿ ತಡೆಗಟ್ಟಲು ಸರ್ಕಾರಕ್ಕೆ ಎಷ್ಟು ಕಾಲಾವಕಾಶ ಬೇಕು?

(ಉ) ನದಿ ತೀರದಲ್ಲಿ ಮರಳು ಸಾಗಾಣಿಗೆ ಪರವಾನಿಗೆ ನೀಡುವಾಗ ಇಲಾಖೆ ಅನುಸರಿಸುವ ನಿಧಿ ವಿಧಾನಗಳೇನು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಸಚಿವರು) :

(ಅ) ಬಂದಿದೆ.

(ಆ) ಈ ಬಗ್ಗೆ ಸರ್ಕಾರ ದಿನಾಂಕ:22-11-93ರಂದು ನಿಷೇದಾಜ್ಞೆ ಹೊರಡಿಸಿದೆ.

(ಇ) ಬಂದಿದೆ. ಇಲಾಖೆಯಿಂದ ಅನೇಕ ಬಾರಿ ದಾಳಿ ನಡೆಸಿ ಲಾರಿಗಳನ್ನು ವಶಪಡಿಸಿಕೊಂಡು ದಂಡ ವಿಧಿಸಲಾಗಿದೆ.

(ಈ) ಮರಳು ಗಣಿಗಾರಿಕೆಯನ್ನು ಹರಾಜು ಮೂಲಕ ವಿಲೇ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದ್ದು ಇದಾದ ನಂತರ ಅಕ್ರಮ ಸಾಗಾಣಿಯನ್ನು ಸಂಪೂರ್ಣವಾಗಿ ತಡೆಗಟ್ಟಲು ಸಾಧ್ಯವಾಗುತ್ತದೆ.

(ಉ) ನದಿ ತೀರದಲ್ಲಿ ಮರಳು ಸಾಗಾಣಿಕೆ ಪರವಾನಿಗೆ ನೀಡುವಾಗ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮ 1994ರಲ್ಲಿ ಕಲ್ಪಿಸಿರುವ ವಿಧಿ ವಿಧಾನಗಳನ್ನು ಅನುಸರಿಸಲಾಗುತ್ತಿದೆ.

ಧಾರವಾಡ ನಗರದಲ್ಲಿ ಉದ್ದಿಮೆಗಳಿಗೆ ವಶಪಡಿಸಿಕೊಂಡ ಜಮೀನಿನ ವಿಸ್ತೀರ್ಣ

2031 (2631) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಧಾರವಾಡದ ಮಹಾನಗರದ ಮಧ್ಯ ಮತ್ತು ಸುತ್ತಲಿನ ಪ್ರದೇಶದಲ್ಲಿ ಉದ್ದಿಮೆಗಳಿಗಾಗಿ ರಾಯಪುರದಲ್ಲಿ ವಶಪಡಿಸಿಕೊಂಡು ಭೂಮಿ ಎಷ್ಟು ಎಕರೆ ಹಾಗೂ ಅಭಿವೃದ್ಧಿ ಪಡಿಸಿರುವ ಪ್ಲಾಟುಗಳು ಎಷ್ಟು? (ವಿವರ ನೀಡುವುದು)

(ಆ) ಈ ಭೂಮಿ ವಶಪಡಿಸಿಕೊಳ್ಳುವ ಮೊದಲು ಮತ್ತು ಭೂಮಿ ಅಭಿವೃದ್ಧಿಪಡಿಸಿದ ನಂತರದಲ್ಲಿ ಯಾವ ಉದ್ದಿಮೆಗಳಿಗೆ ನೀಡಲಾಗಿದೆ ಹಾಗೂ ಯಾವ ಯಾವ ಉದ್ದಿಮೆಗಳಿಗಾಗಿ ಬೇಡಿಕೆ ಅತಿ ಚಿಕ್ಕ ಚಿಕ್ಕ ಅಥವಾ ಮಧ್ಯಮಗಳಿಗಾಗಿ ಇದೆ? (ವಿವರ ನೀಡುವುದು)

(ಇ) ಈ ಉದ್ದಿಮೆ ಪ್ರದೇಶದಲ್ಲಿ ಉದ್ದಿಮೆ ಕಟ್ಟಿಸಲಾಗುವುದೇ?